ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 583
ವಿಧಾನ ಪರಿಷತ್ತಿನ ಸದಸ್ಯರ ಹೆಸರು	: ಶ್ರೀ ಯು.ಬಿ ವೆಂಕಟೇಶ್, (ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	: 21.02.2022.
ಉತ್ತರಿಸುವ ಸಚಿವರು	: ಅರಣ್ಯ ಮತ್ತು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಕಾನೂನು ಮಾಪನಶಾಸ್ತ್ರ ಇಲಾಖೆಯಲ್ಲಿರುವ ಒಟ್ಟು ವರ್ಗವಾರು ಹುದ್ದೆಗಳ ಸಂಖ್ಯೆ ಎಷ್ಟು;(ವೃಂದವಾರು ವಿವರ ನೀಡುವುದು)	ಸರ್ಕಾರದ ಆದೇಶ ಸಂಖ್ಯೆ:ಆನಾಸ 74 ಕಾಮಾಪಸೇ 2019(ಇ-ಆ), ದಿನಾಂಕ:16.08.2021ರಲ್ಲಿ, ಕಾನೂನು ಮಾಪನಶಾಸ್ತ್ರ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳ ಮಂಜೂರಾದ ಹುದ್ದೆಗಳಿಗೆ ಸಂಬಂಧಿಸಿದಂತೆ ಮರು ಸಂಘಟನಾ ಆದೇಶವನ್ನು ಹೊರಡಿಸಲಾಗಿದ್ದು, ಈ ಕೆಳಕಂಡಂತೆ ಒಟ್ಟು 450 ಮಂಜೂರಾತಿ ಹುದ್ದೆಗಳಿವೆ.

ಕ್ರ.ಸಂ	ವೃಂದವಾರು ವಿವರ	ಸಂಖ್ಯೆ
1.	ನಿಯಂತ್ರಕರು	01
2.	ಜಂಟಿ ನಿಯಂತ್ರಕರು	04
3.	ಉಪ ನಿಯಂತ್ರಕರು	08
4.	ಸಹಾಯಕ ನಿಯಂತ್ರಕರು ಗ್ರೇಡ್-1	16
5.	ಸಹಾಯಕ ನಿಯಂತ್ರಕರು ಗ್ರೇಡ್-2	34
6.	ನಿರೀಕ್ಷಕರು	107
7.	ಹಿರಿಯ ತಾಂತ್ರಿಕ ಸಹಾಯಕರು	40
8.	ತಾಂತ್ರಿಕ ಸಹಾಯಕರು(ದೈಹಿಕ ಸಹಾಯಕರು)	85
9.	ಪತ್ರಾಂಕಿತ ವ್ಯವಸ್ಥಾಪಕರು	01
10.	ಅಧೀಕ್ಷಕರು	04
11.	ಪ್ರಥಮ ದರ್ಜೆ ಸಹಾಯಕರು	34
12.	ದ್ವಿತೀಯ ದರ್ಜೆ ಸಹಾಯಕರು	45
13.	ಶೀಘ್ರಲಿಪಿಗಾರರು	05
14.	ಬೆರಳಚ್ಚುಗಾರರು	10
15.	ವಾಹನ ಚಾಲಕರು	06
16.	ಗ್ರೂಪ್-ಡಿ	50
	ಒಟ್ಟು	450

(ಆ)	ಈ ಪೈಕಿ ಹೈದರಾಬಾದ್-ಕರ್ನಾಟಕ ಭಾಗದ ನೌಕರರ ಸಂಖ್ಯೆ ಎಷ್ಟು; (ವೃಂದವಾರು ವಿವರ ನೀಡುವುದು)	ಮೇಲೆ ವಿವರಿಸಿರುವಂತೆ ಕಾನೂನು ಮಾಪನಶಾಸ್ತ್ರ ಇಲಾಖೆಯ ವೃಂದ ಬಲಕ್ಕೆ ಸಂಬಂಧಿಸಿದಂತೆ ಮರು ಸಂಘಟನ ಆದೇಶವನ್ನು ಹೊರಡಿಸಲಾಗಿದ್ದು, ಹೈದ್ರಾಬಾದ್ - ಕರ್ನಾಟಕ ಭಾಗದ ಹುದ್ದೆಗಳನ್ನು ಗುರುತಿಸುವ ಬಗ್ಗೆ ಕ್ರಮ ವಹಿಸಲಾಗುತ್ತಿದೆ.
(ಇ)	ಹಾಗಿದ್ದಲ್ಲಿ ಸುಮಾರು 2 ತಿಂಗಳ ಹಿಂದೆಯೇ ನಿರೀಕ್ಷಕ ಹುದ್ದೆಯಿಂದ ಸಹಾಯಕ ನಿಯಂತ್ರಕರ ಹುದ್ದೆಗೆ ಮುಂಬಡ್ತಿ ನೀಡಲು ಡಿಪಿಸಿ ಆಗಿದ್ದರೂ, ಈವರೆಗೆ ಮುಂಬಡ್ತಿ ಆದೇಶ ಹೊರಡಿಸದೇ ಅವರಿಗೆ ಅನ್ಯಾಯ ಮಾಡುತ್ತಿರಲು ಕಾರಣಗಳೇನು?	ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದಲ್ಲಿ ಪ್ರಸ್ತಾವನೆ ಇರುವುದಿಲ್ಲ.

ಸಂಖ್ಯೆ: ಆನಾಸ 26 ಕಾಮಾಸೇ 2022 (ಇ-ಆಫೀಸ್)

(ಉಮೇಶ್ ವಿ. ಕತ್ತಿ)

ಅರಣ್ಯ ಮತ್ತು ಆಹಾರ, ನಾಗರಿಕ ಸರಬರಾಜು ಮತ್ತು

ಗ್ರಾಹಕರ ವ್ಯವಹಾರಗಳ ಹಾಗೂ

ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು